

ಸೂಟ್‌ಕೇಸ್‌ಗಳನ್ನು ಎಳೆದುಕೊಂಡು ಬಂದಳು. ರಾತ್ರಿಯೆಲ್ಲ ನಿದ್ದೆಗೆಟ್ಟು, ಮುಖ ತೊಳೆಯದೇ ಎದ್ದು ಬಂದಿದ್ದರೂ ಇನ್ನೂ ಚೆನ್ನಾಗಿಯೇ ಇದ್ದಾಳಲ್ಲ, ಇದು ಎಂದೂ ಹುಡುಗಿಯರನ್ನೇ ಕಾಣದ ನನ್ನ ಭ್ರಮೆಯೋ, ನಿಜಕ್ಕೂ ಚೆನ್ನಾಗಿರುವಳೋ, ಇಲ್ಲಾ ಇವಳು ನನ್ನಲ್ಲಿ ತೋರಿಸುತ್ತಿರುವ ಸಲಿಗೆಯಿಂದ ಚಂದ ಕಾಣುತ್ತಿರುವಳೋ ಎನಿಸಿತು.

ನನ್ನ ಕಂಡದ್ದೇ ಅವಳು ಕಣ್ಣರಳಿಸಿ ನಕ್ಕು, 'ಇದೇನೋ ಆನೆಮರಿ, ಇಷ್ಟೊತ್ತಿಗೇ ಹಾಜರಾಗಿಬಿಟ್ಟಿದ್ದೀಯಾ, ನೀನು ಊರಿಂದ ಇನ್ನೂ ಬಂದಿರಲ್ಲಾ ಅಂದುಕೊಂಡೆ' ಎಂದಳು.

ನಾನು, 'ಅಯ್ ಹಂಗೇನಿಲ್ಲ. ಇನ್ನೇನು ಇವತ್ತಿಂದ್ಲೇ ಹಾಸ್ಟೆಲು, ಕ್ಲಾಸು ಎಲ್ಲ ಶುರು ತಾನೇ, ನಾನು ನಿನ್ನೆನೇ ಊರಿಂದ ಬಂದೆ, ಹಾಸ್ಟೆಲಲ್ಲಿ ನನ್ನ ಲಗೇಜು ಇಳಿಸಿದ್ದಾಯಿತು, ನೀನು ಹೆಂಗೂ ಬತ್ತೀಯಲ್ಲ ಅಂತ ಬಂದೆ' ಅಂದು ಅವಳ ಲಗೇಜಿಗೆ ಕೈ ಹಾಕಿ, 'ಇವನ್ನು ತಲೆ ಮೇಲಿಟ್ಕಂತಿನಿ ಕೊಡು' ಅಂದೆ.

'ಅಯ್ಯೋ ಅದು ತುಂಬ ಭಾರ.'

'ಅಯ್ ತಗೋ ಇದ್ಯಾವ ಮಹಾ.'

'ಎಯ್ ದಡ್ಡಾ ಸುಮ್ಮನೆ ಎಳಕೊಂಡು ನಡಿ. ಆನೆಮರಿ ಅಂತ ಶಕ್ತಿ ತೋರಿಸಬೇಡಾ. ಸೂಟ್‌ಕೇಸಿಗೆ ಚಕ್ರ ಇರದು ಗೊತ್ತಾಗಲ್ವ. ರಿಕ್ಷಾಗಂಟ ಎಳ್ಕಂಡು ನಡಿ.'

'ಆಯ್ತು ನಿನ್ನ ಹೆಗಲಿಗೆ ತಗಲಾಕಿರದನ್ನೂ ಕೊಡು ಇಲ್ಲಿ.'

'ಇಲ್ಲ, ಇಲ್ಲ ನನ್ನತ್ರಾನೆ ಇರ್ಲಿ, ಅದು ಬಾಳ ಕಾಸ್ಟ್ಲಿ' ಅಂದು ನಕ್ಕಳು.

ಅವಳು ಹೇಳಿದಂತೆ ಸೂಟ್‌ಕೇಸ್ ಹಿಡಿದು ಎತ್ತಲು ಹೋದರೆ ಅವು ಎರಡು ಕರಿಕಲ್ಲು ತುಂಡಿನಂತೆ ಇದ್ದವು. 'ಯಲಾ ಈ ಸೂಟ್‌ಕೇಸಿನಲ್ಲಿ ಅದೇನು